www.prepp.in

Prepp
Your Personal Exams Guide

PAPER-III
KANNADA

Signature and Name of Invigilator

1. (Signature) _____
   (Name) _____
2. (Signature) _____
   (Name) _____

OMR Sheet No. : .....
(To be filled by the Candidate)

Roll No. | | | | | | | | |
(In figures as per admission card)

Roll No._____
(In words)

J 2 1 1 4

Time : **2 ½** hours] [Maximum Marks : **150**

Number of Pages in this Booklet : **12**

Number of Questions in this Booklet : **75**

Instructions for the Candidates

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   Example : Ⓐ Ⓑ ● Ⓓ
   where (C) is the correct response.
5. Your responses to the items are to be indicated in the **OMR Sheet given inside the Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means such as change of response by scratching or using white fluid, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचहत्तर बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   उदाहरण : Ⓐ Ⓑ ● Ⓓ
   जबकि (C) सही उत्तर है ।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**

www.prepp.in

Prepp
Your Personal Exams Guide

KANNADA
Paper – III

Note : This paper contains **seventy five (75)** objective type questions of **two (2)** marks each. **All** questions are compulsory.

1. **ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**
ಸಂಸ್ಕೃತ, ಪ್ರಾಕೃತ ಮತ್ತು ಕನ್ನಡದ ಅವತರಣಿಕೆ-ಗಳನ್ನೊಳಗೊಂಡ ಪ್ರಾಚೀನ ಕನ್ನಡ ಕೃತಿ
(A) ಪಂಚತಂತ್ರ
(B) ರಾಮಾಶ್ವಮೇಧ
(C) ವಡ್ಡಾರಾಧನೆ
(D) ಮುದ್ರಾಮಂಜೂಷ

2. 'ಬೆರಸಲ್ಕೆ ತಕ್ಕುದೆ ಘೃತಮುಮಂ ತೈಲಮುಮಂ' ಎಂದು ಪ್ರಶ್ನಿಸಿದ ಕವಿ
(A) ನಯಸೇನ
(B) ನಾಗಚಂದ್ರ
(C) ಜನ್ನ
(D) ಒಂದನೆಯ ನಾಗವರ್ಮ

3. 'ಕರ್ಮಣಿ ಸರದೊಳ್ ಬೆಂಬವಳಮಂ ಕೋದಂತಿರೆ ರಸಮೊಸರೆ.... ತಿರುಳ್ಗನ್ನಡದೊಳ್ ಕಥೆಯನುಸಿರ್ವೆಂ' ಎಂದು ಹೇಳಿದ ಕವಿ
(A) ಬಸವಪ್ಪ ಶಾಸ್ತ್ರಿ (B) ರತ್ನಾಕರವರ್ಣಿ
(C) ರಾಘವಾಂಕ (D) ಮುದ್ದಣ

4. 'ಸತ್ತವರ ಕಥೆಯಲ್ಲ, ಕಾಳಗದ ಕಥೆಯಲ್ಲ' ಎಂದು ತನ್ನ ಕೃತಿಯಲ್ಲಿ ಘೋಷಿಸಿಕೊಂಡ ಕವಿ
(A) ಕುಮಾರವ್ಯಾಸ (B) ಚಾಮರಸ
(C) ಲಕ್ಷ್ಮೀಶ (D) ಕನಕದಾಸ

5. ಇದು ಆಧುನಿಕ ಕಾಲದ ಕನ್ನಡದ ಮೊದಲ ಮಹಾಕಾವ್ಯ
(A) ಭಾರತ ಸಿಂಧುರಶ್ಮಿ
(B) ಶ್ರೀಹರಿ ಚರಿತೆ
(C) ಶ್ರೀ ರಾಮಾಯಣ ದರ್ಶನಂ
(D) ಮಂಕುತಿಮ್ಮನ ಕಗ್ಗ

6. ಕನ್ನಡದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದವರು
(A) ಜಿ.ಪಿ. ರಾಜರತ್ನಂ (B) ಚೆನ್ನವೀರ ಕಣವಿ
(C) ಬಿ.ಎಂ. ಶ್ರೀ. (D) ಸಿದ್ಧಲಿಂಗಯ್ಯ

7. ಮೂರು ತಲೆಮಾರುಗಳ ಕಥೆಯನ್ನೊಳ-ಗೊಂಡ ಕಾದಂಬರಿ
(A) ಅಳಿದ ಮೇಲೆ
(B) ಬೆಟ್ಟದ ಜೀವ
(C) ಮೈ ಮನಗಳ ಸುಳಿಯಲ್ಲಿ
(D) ಮರಳಿ ಮಣ್ಣಿಗೆ

8. ಚಿತ್ರದುರ್ಗದ ಇತಿಹಾಸವನ್ನೊಳಗೊಂಡ ಕಾದಂಬರಿ
(A) ಶಾಂತಲಾ (B) ದುರ್ಗಾಸ್ತಮಾನ
(C) ಚೆನ್ನಬಸವನಾಯಕ (D) ರಣವಿಕ್ರಮ

9. ಪೌರಾಣಿಕ ವಸ್ತುವನ್ನು ಆಧರಿಸಿ ನಾಟಕಗಳನ್ನು ರಚಿಸಿದವರು
(A) ಎ. ಲಂಕೇಶ್
(B) ಎಚ್. ಎಸ್. ಶಿವಪ್ರಕಾಶ್
(C) ಪರ್ವತವಾಣಿ
(D) ಶ್ರೀಕಂಠೇಗೌಡ

10. ಜಾನಪದ ವಸ್ತುವಿನಿಂದ ಪ್ರೇರಣೆಗೊಂಡು ರಚಿತವಾದ ನಾಟಕ
(A) ಸಂಜೀವನಿ ಸಾವಿತ್ರಿ (B) ಕತ್ತಲೆ ಬೆಳಕು
(C) ಕೊಡೆಗಳು (D) ನಾಗಮಂಡಲ

11. ಪ್ರಾಚೀನ ಕವಿಗಳ ಕಾಲ, ಮತ ಮತ್ತು ದೇಶಗಳನ್ನು ಕುರಿತು ಹೆಚ್ಚಿನ ಸಂಶೋಧನೆ ಮಾಡಿದವರು
(A) ಗೋವಿಂದ ಪೈ
(B) ಡಿ.ಕೆ. ಭೀಮಸೇನ ರಾವ್
(C) ಸೇಡಿಯಾಪು ಕೃಷ್ಣಭಟ್ಟ
(D) ಎಂ.ಎಸ್. ಸುಂಕಾಪುರ

www.prepp.in

Prepp
Your Personal Exams Guide

12. ಜಿ.ಎಸ್. ಆಮೂರ ಅವರು ರಚಿಸಿದ ವಿಮರ್ಶಾ ಕೃತಿ
(A) ಮಹಾಕವಿ ರಾಘವಾಂಕ
(B) ಭುವನದ ಭಾಗ್ಯ
(C) ವಿಮರ್ಶೆಯ ವ್ರತ
(D) ಸಂಪ್ರತಿ

13. 'ಧ್ವನಿಯೆಂಬುದಳಂಕಾರಂ ಧ್ವನಿಯಸುಗುಂ ಶಬ್ದದಿಂದಂ' ಈ ವಾಕ್ಯವಿರುವ ಲಕ್ಷಣ ಗ್ರಂಥ
(A) ರಸ ರತ್ನಾಕರ
(B) ಕಾವ್ಯಾವಲೋಕನ
(C) ಕವಿರಾಜಮಾರ್ಗ
(D) ಅಪ್ರತಿಮ ವೀರ ಚರಿತ

14. ಪಾಶ್ಚಾತ್ಯ ಕಾವ್ಯ ಮೀಮಾಂಸೆಯ 'ಇಮ್ಯಾಜಿನೇಷನ್' ಗೆ ಸಂವಾದಿಯಾದ ಭಾರತೀಯ ಕಾವ್ಯ ತತ್ವ
(A) ಶಬ್ದ ಶಕ್ತಿ (B) ಕವಿ ಸಮಯ
(C) ರಸಾನುಭವ (D) ಪ್ರತಿಭೆ

15. ಪ್ರಾಯೋಗಿಕ ವಿಮರ್ಶೆಯ ಪ್ರತಿಪಾದಕ
(A) ಸಿಗ್ಮಂಡ್ ಫ್ರಾಯ್ಡ್
(B) ಐ.ಎ. ರಿಚರ್ಡ್ಸ್
(C) ಟಿ.ಎಸ್. ಎಲಿಯಟ್
(D) ರೇಮಂಡ್ ವಿಲಿಯಮ್ಸ್

16. ಸ್ತ್ರೀ ಪಾರತಂತ್ರ್ಯದ ಕುರಿತು ವಿಮರ್ಶಾವಲಯದಲ್ಲಿ ಚಿಂತಿಸಿದವರು
(A) ಕೇಟ್ ಮಿಲ್ಲೆಟ್
(B) ಎಡ್ವರ್ಡ್ ಸೈಯದ್
(C) ಬ್ರಿಕ್ಸ್
(D) ಸ್ಯಾಮ್ಯುಯಲ್ ಜಾನ್‌ಸನ್

17. ಇವು ಕನ್ನಡದ ದೇಶೀಯ ವರ್ಣಗಳು
(A) ಕ್, ಚ, ಟ, ತ
(B) ಯ, ರ, ಲ, ವ
(C) ಎ, ಒ, ಱ, ೞ
(D) ಋ, ಐ, ಔ, ಅಂ

18. ಇದೊಂದು ಕನ್ನಡದ ಸಾಮಾಜಿಕ ಉಪಭಾಷೆ
(A) ಧಾರವಾಡ ಕನ್ನಡ
(B) ಸೋಲಿಗ ಕನ್ನಡ
(C) ರಾಯಚೂರು ಕನ್ನಡ
(D) ಮೈಸೂರು ಕನ್ನಡ

19. 'ಗುಡಿವಿಡಿಪಂತೆ ನೀಟ್ಪ ನಿತು ಪೇಳ್ವುದು ನೀತಿ-ನಿರಂತರಕ್ರಮಂ' ಇದು ಯಾವ ವೃತ್ತಕ್ಕೆ ಉದಾಹರಣೆಯಾಗಿದೆ ?
(A) ಉತ್ಪಲಮಾಲೆ
(B) ಮತ್ತೇ ಭವಿಕ್ರೀಡಿತ
(C) ಸ್ರಗ್ಧರಾ
(D) ಚಂಪಕಮಾಲೆ

20. ವಿಷ್ಣು ಗಣವು ಎಷ್ಟು ಪ್ರಕಾರವಾಗಿದೆ ?
(A) ಹನ್ನೆರಡು (B) ಹದಿನಾಲ್ಕು
(C) ಎಂಟು (D) ಆರು

21. 'ಮುಖವೀಣೆ' ಯನ್ನು ಬಳಸುವ ರಂಗಪ್ರಕಾರ
(A) ಮೂಡಲಪಾಯ
(B) ಯಕ್ಷಗಾನ ಬಯಲಾಟ
(C) ಸೂತ್ರದ ಬೊಂಬೆಯಾಟ
(D) ಕೃಷ್ಣ ಪಾರಿಜಾತ

22. 'ಮಾರ್ಫಾಲಜಿ ಆಫ್ ದಿ ಫೋಕ್ ಟೇಲ್' ಎಂಬ ಗ್ರಂಥವನ್ನು ರಚಿಸಿದವರು
(A) ಪೀಟರ್ ಜೆ. ಕ್ಲಾಸ್
(B) ಲೌರಿ ಹಾಂಕೂಂ
(C) ಈಲಿಯಾಸ್ ಲೊನ್ರಾಟ್
(D) ವಿ.ಜೆ. ಪ್ರಾಪ್

23. ಇದು ರೂಪಾಂತರ ಪ್ರಕಾರಕ್ಕೆ ಒಂದು ಉದಾಹರಣೆ
(A) ರಾಮಧಾನ್ಯ ಚರಿತೆ
(B) ಕರ್ನಾಟಕ ಕಾದಂಬರಿ
(C) ಯಯಾತಿ
(D) ಹದಿಬದೆಯ ಧರ್ಮ

www.prepp.in

Prepp
Your Personal Exams Guide

24. 'ವಚನ ಭಾರತ' ಈ ಪ್ರಕಾರಕ್ಕೆ ಒಂದು ಉದಾಹರಣೆ
(A) ಶಬ್ದಾನುವಾದ
(B) ವಿಸ್ತಾರಾನುವಾದ
(C) ಸಂಗ್ರಹಾನುವಾದ
(D) ಅಳವಡಿಕೆ

25. ತ್ರಿಪದಿಯಲ್ಲಿ ಬ್ರಹ್ಮಗಣವು ನಿಯತವಾಗಿ ಬರಬೇಕಾದ ಸ್ಥಾನಗಳು
(A) ಆರು ಮತ್ತು ಹತ್ತು
(B) ಆರು ಮತ್ತು ಹನ್ನೊಂದು
(C) ಐದು ಮತ್ತು ಹತ್ತು
(D) ನಾಲ್ಕು ಮತ್ತು ಎಂಟು

26. ಮೊದಲು ಅಂಶಗಣಾತ್ಮಕವಾಗಿದ್ದು ಬಳಿಕ ಮಾತ್ರಾ ಗಣಾತ್ಮಕವಾದ ಛಂದಸ್ಸು
(A) ಸಾಂಗತ್ಯ (B) ಕಂದ
(C) ಏಳೆ (D) ಷಟ್ಪದಿ

27. ಇದೊಂದು ವೀರಗಲ್ಲು ಶಾಸನ
(A) ಹಲ್ಮಡಿ ಶಾಸನ
(B) ಕುವರ ಲಕ್ಷ್ಮ ನ ಶಾಸನ
(C) ಆತಕೂರು ಶಾಸನ
(D) ಬೊಪ್ಪಣನ ಶಾಸನ

28. ಹಲ್ಮಿಡಿ ಶಾಸನದ ಲಿಪಿಯು ಯಾವ ಅರಸರ ಕಾಲಕ್ಕೆ ಸೇರಿದೆ ?
(A) ರಾಷ್ಟ್ರಕೂಟರು (B) ಗಂಗರು
(C) ಕದಂಬರು (D) ಹೊಯ್ಸಳರು

29. ಇಲೈ > ಎಲೆ : ಇಲ್ಲಿ ಕಾಣುವ ಧ್ವನಿ ವ್ಯತ್ಯಾಸ
(A) ಇ / ಎ ವ್ಯತ್ಯಯ
(B) ಉ / ಒ ವ್ಯತ್ಯಯ
(C) ತಾಲವ್ಯೀಕರಣ
(D) ಸ್ವರಾನುರೂಪತೆ

30. ಇವು ದಕ್ಷಿಣ ದ್ರಾವಿಡ ಭಾಷೆಗಳು
(A) ಗೊಂಡಿ, ಕಸಬ
(B) ಕೊರಗ, ಕೊಲಾಮಿ
(C) ಕಾಡ, ಗದಬ
(D) ತೊದ, ಕೋತ

ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :

31. ಇವು ಜೈನ ಕೃತಿಗಳು
i. ಧರ್ಮಾಮೃತ
ii. ಯಶೋಧರ ಚರಿತೆ
iii. ಛಂದೋಂಬುಧಿ
iv. ಶಬರ ಶಂಕರ ವಿಳಾಸ
ಇವುಗಳಲ್ಲಿ ಸರಿಯಾದ ಉತ್ತರ
(A) i ಮತ್ತು iii (B) ii ಮತ್ತು iii
(C) i ಮತ್ತು ii (D) iii ಮತ್ತು iv

32. ಇವು ವಾರ್ಧಕ ಷಟ್ಪದಿಯಲ್ಲಿರುವ ಕೃತಿಗಳು
i. ನಳಚರಿತ್ರೆ- ಪ್ರಭುಲಿಂಗ ಲೀಲೆ
ii. ಸಿದ್ಧರಾಮ ಚಾರಿತ್ರ್ಯ- ಜೈಮಿನಿ ಭಾರತ
iii. ಶ್ರೀರಾಮ ಪಟ್ಟಾಭಿಷೇಕ - ಹರಿಶ್ಚಂದ್ರ ಕಾವ್ಯ
iv. ಕರ್ಣಾಟ ಭಾರತ ಕಥಾಮಂಜರಿ - ಮೋಹನ ತರಂಗಿಣಿ
ಇವುಗಳಲ್ಲಿ ಸರಿಯಾದ ಉತ್ತರ
(A) i ಮತ್ತು iii
(B) ii ಮತ್ತು iii
(C) ii ಮತ್ತು iv
(D) iii ಮತ್ತು iv

33. ಇವು ವಿ. ಕೃ. ಗೋಕಾಕ ಅವರ ಕೃತಿಗಳು
i. ಸಮುದ್ರ ಗೀತೆಗಳು - ನವ್ಯ ಗೀತೆಗಳು
ii. ಸಮುದ್ರದಾಚೆಯಿಂದ - ಹೃದಯರಂಗ
iii. ತೆರೆದ ಬಾಗಿಲು - ವಿಮರ್ಶಕ ವೈದ್ಯ
iv. ಭಾರತ ಸಿಂಧುರಶ್ಮಿ- ದ್ಯಾವಾ ಪೃಥಿವಿ
ಇವುಗಳಲ್ಲಿ ಸರಿಯಾದ ಉತ್ತರ
(A) ii ಮತ್ತು iii (B) i ಮತ್ತು iii
(C) iv ಮತ್ತು iii (D) i ಮತ್ತು iv

www.prepp.in

Prepp
Your Personal Exams Guide

34. ತ್ರಿವೇಣಿ ಅವರು ರಚಿಸಿದ ಕಾದಂಬರಿಗಳು

i. ಅಪಸ್ವರ ಮತ್ತು ನಿಸರ್ಗ

ii. ಬಿಳ್ಳಿಮೋಡ ಮತ್ತು ಹೂವುಹಣ್ಣು

iii. ಸೋತು ಗೆದ್ದವಳು ಮತ್ತು ಮುಚ್ಚಿದ ಬಾಗಿಲು

iv. ಕಾಶಿಯಾತ್ರೆ ಮತ್ತು ಹೃದಯ ವಲ್ಲಭ

ಇವುಗಳಲ್ಲಿ ಸರಿಯಾದ ಉತ್ತರ

(A) ii ಮತ್ತು iii (B) ii ಮತ್ತು iv

(C) i ಮತ್ತು iii (D) ii ಮತ್ತು i

35. ಇವು ಶ್ರೀರಂಗರ ನಾಟಕಗಳು

i. ಉಂಡಾಡಿ ಗುಂಡ - ಗಂಡಸ್ಕತ್ತಿ

ii. ಜೀವನ ಜೋಕಾಲಿ - ದರಿದ್ರ ನಾರಾಯಣ

iii. ಧರ್ಮ ವಿಜಯ - ಕಾಕನ ಕೋಟೆ

iv. ಪರಮೇಶ್ವರ ಪುಲಕೇಶಿ - ಕಾಲಾಯ ತಸ್ಮೈನ್ನಮಃ

ಇವುಗಳಲ್ಲಿ ಸರಿಯಾದ ಉತ್ತರ

(A) i ಮತ್ತು iv

(B) ii ಮತ್ತು iii

(C) ii ಮತ್ತು iv

(D) iii ಮತ್ತು iv

36. ಹಳಗನ್ನಡ ಕಾವ್ಯಗಳನ್ನು ಕುರಿತು ಸಂಶೋಧನೆ ಮಾಡಿದವರು

i. ಕುಶಾಲಪ್ಪಗೌಡ - ಎ.ಕೆ. ರಾಮಾನುಜನ್

ii. ವೆಂಕಟಾಚಲಶಾಸ್ತ್ರಿ - ಡಿ.ಎಲ್. ನರಸಿಂಹಾಚಾರ್

iii. ಕ.ವೆಂ. ರಾಘವಾಚಾರ್ - ಹಂಪ. ನಾಗರಾಜಯ್ಯ

iv. ಕೀರ್ತಿನಾಥ ಕುರ್ತಕೋಟಿ - ಎಸ್.ಸಿ. ನಂದೀಮಠ

ಇವುಗಳಲ್ಲಿ ಸರಿಯಾದ ಉತ್ತರ

(A) ii ಮತ್ತು iv (B) ii ಮತ್ತು iii

(C) iii ಮತ್ತು iv (D) iii ಮತ್ತು i

37. ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು

i. ಅನುಕರಣ - ವಿರೇಚನೆ

ii. ವಕ್ರೋಕ್ತಿ - ಭವ್ಯತೆ

iii. ಧ್ವನಿ - ರೀತಿ

iv. ಕಾವ್ಯ ಪ್ರತಿಮೆ - ಮಾನಸಿಕ ದೂರ

ಇವುಗಳಲ್ಲಿ ಸರಿಯಾದ ಉತ್ತರ

(A) ii ಮತ್ತು iii

(B) iii ಮತ್ತು iv

(C) i ಮತ್ತು iii

(D) i ಮತ್ತು iv

38. ಟಿ.ಎಸ್. ಎಲಿಯಟ್ ವಿಮರ್ಶಾ ಕ್ಷೇತ್ರಕ್ಕೆ ಕೊಟ್ಟ ಪಾರಿಭಾಷಿಕ ಪದಗಳು.

i. ಹಿಸ್ಟಾರಿಕಲ್ ಪರ್ಸೆಪ್ಷನ್

ii. ಎಸ್ಕೇಪ್ ಫ್ರಮ್ ಎಮೋಷನ್

iii. ಎಕ್ಸ್ಪ್ರೆಷನ್

iv. ಈಡಿಪಸ್ ಕಾಂಪ್ಲೆಕ್ಸ್

ಇವುಗಳಲ್ಲಿ ಸರಿಯಾದ ಉತ್ತರ

(A) i ಮತ್ತು ii

(B) i ಮತ್ತು iii

(C) ii ಮತ್ತು iii

(D) ii ಮತ್ತು iv

39. ಉತ್ತರ ಪದದ ಅರ್ಥವು ಪ್ರಧಾನವಾಗಿರುವ ಸಮಾಸಗಳು

i. ಅಂಶಿ ಮತ್ತು ದ್ವಂದ್ವ

ii. ದ್ವಿಗು ಮತ್ತು ಕ್ರಿಯಾ

iii. ಬಹುವ್ರೀಹಿ ಮತ್ತು ಗಮಕ

iv. ಕರ್ಮಧಾರಯ ಮತ್ತು ತತ್ಪುರುಷ

ಇವುಗಳಲ್ಲಿ ಸರಿಯಾದ ಉತ್ತರ

(A) iii ಮತ್ತು ii

(B) ii ಮತ್ತು i

(C) iv ಮತ್ತು ii

(D) iv ಮತ್ತು i

www.prepp.in

Prepp
Your Personal Exams Guide

40. ಕರ್ನಾಟಕ ವಿಷಯ ಜಾತಿಗೆ ಸೇರಿದ ಛಂದೋರೂಪಗಳು

i. ಅಕ್ಕರಿಕೆ - ಮದನವತಿ

ii. ಮಹಾಸ್ರಗ್ಧರೆ - ಚೌಪದಿ

iii. ಏಳೆ - ಛಂದೋವತಂಸ

iv. ಮಲ್ಲಿಕಾಮಾಲೆ - ರಗಳೆ

ಇವುಗಳಲ್ಲಿ ಸರಿಯಾದ ಉತ್ತರ

(A) i ಮತ್ತು iv

(B) i ಮತ್ತು iii

(C) ii ಮತ್ತು iii

(D) ii ಮತ್ತು iv

41. ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಜನಪದ ರಂಗಭೂಮಿಯ ಪ್ರಕಾರಗಳು

i. ತೆಂಕುತಿಟ್ಟು ಯಕ್ಷಗಾನ - ದೊಡ್ಡಾಟ

ii. ಶ್ರೀಕೃಷ್ಣ ಪಾರಿಜಾತ - ದಾಸರಾಟ

iii. ಬಡಗುತಿಟ್ಟು ಯಕ್ಷಗಾನ - ಘಟ್ಟದ ಕೋರೆ

iv. ತಾಳಮದ್ದಳೆ - ಮೂಡಲ ಪಾಯ

ಇವುಗಳಲ್ಲಿ ಸರಿಯಾದ ಉತ್ತರ

(A) i ಮತ್ತು iii

(B) i ಮತ್ತು iv

(C) ii ಮತ್ತು iii

(D) iii ಮತ್ತು iv

42. ಇವು ಪ್ರಾದೇಶಿಕ ಕಾದಂಬರಿಗಳು

i. ಗ್ರಾಮಾಯಣ - ಮರಳಿ ಮಣ್ಣಿಗೆ

ii. ದಾಟು - ಸಂಸ್ಕಾರ

iii. ಬಿಟ್ಟದ ಜೀವ - ಕಾನೂರು ಹೆಗ್ಗಡಿತಿ

iv. ರೂಪದರ್ಶಿ- ಕ್ಷಿತಿಜ

ಇವುಗಳಲ್ಲಿ ಸರಿಯಾದ ಉತ್ತರ

(A) i ಮತ್ತು iii

(B) i ಮತ್ತು iv

(C) ii ಮತ್ತು iii

(D) iii ಮತ್ತು iv

43. ಷಟ್ಪದಿ ಛಂದೋರೂಪದ ಪ್ರಕಾರಗಳು

i. ಉತ್ಸಾಹ - ವಾರ್ಧಕ

ii. ಭಾಮಿನಿ - ಶರ

iii. ಪರಿವರ್ಧಿನಿ - ಕುಸುಮ

iv. ಭೋಗ - ಚಂಪಕಮಾಲೆ

ಇವುಗಳಲ್ಲಿ ಸರಿಯಾದ ಉತ್ತರ

(A) iii ಮತ್ತು iv

(B) i ಮತ್ತು ii

(C) ii ಮತ್ತು iii

(D) iv ಮತ್ತು ii

44. ಮೂಲ ದ್ರಾವಿಡದ ಪದಾದಿಯ 'ಇ' ಕಾರವು 'ಎ' ಕಾರವಾಗಿ ಪರಿವರ್ತನೆಗೊಂಡ ಭಾಷೆಗಳು

i. ಕನ್ನಡ ii. ಬ್ರಾಹೂಈ

iii. ತೆಲುಗು iv. ಗದಬ

ಇವುಗಳಲ್ಲಿ ಸರಿಯಾದ ಉತ್ತರ

(A) ii ಮತ್ತು iii

(B) i ಮತ್ತು iii

(C) i ಮತ್ತು iv

(D) ii ಮತ್ತು iv

45. ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಗ್ರಂಥವನ್ನು ಬರೆದವರು

i. ವಿಜಯಾದಬ್ಬೆ- ವಿ.ಎಂ. ಇನಾಂದಾರ್

ii. ರಂ.ಶ್ರೀ. ಮುಗಳಿ - ಮರಿಯಪ್ಪ ಭಟ್ಟ

iii. ಎಲ್.ಎಸ್. ಶೇಷಗಿರಿರಾವ್- ಸಿ.ಎನ್. ರಾಮಚಂದ್ರನ್

iv. ಬಿ.ಎಂ. ಶ್ರೀಕಂಠಯ್ಯ - ಆರ್. ನರಸಿಂಹಾಚಾರ್

ಇವುಗಳಲ್ಲಿ ಸರಿಯಾದ ಉತ್ತರ

(A) i ಮತ್ತು ii

(B) ii ಮತ್ತು iii

(C) iii ಮತ್ತು iv

(D) ii ಮತ್ತು iv

www.prepp.in

Prepp
Your Personal Exams Guide

ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :

46. **ಹೇಳಿಕೆ** : 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್'

ವಿವರಣೆ : ಔಪಚಾರಿಕ ವಿದ್ಯಾಭ್ಯಾಸವನ್ನು ಪಡೆದರೂ ರಸಾಸ್ವಾದನೆ ಮಾಡುವುದರಲ್ಲಿ ಅಸಮರ್ಥರು.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ, ವಿವರಣೆ ಸರಿ.

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ.

47. **ಹೇಳಿಕೆ** : 'ಸೆಗಣಿಯ ಬಿನಕಂಗೆ ಸಂಪಗೆ ಅರಳಲ್ಲಿ ಪೂಜಿಸಿದರೆ ಅದರ ಎಂಜಲ ಬಿಡದಣ್ಣ'

ವಿವರಣೆ : ಸೆಗಣಿಯ ಶುನಕನಿಗೆ ಸಂಪಿಗೆಯ ಹೂವಿನಲ್ಲಿ ಅರ್ಚಿಸಿದರೆ ಅದರ ವಾಸನೆ ನಾಶವಾಗದು.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ.

(D) ಹೇಳಿಕೆ ತಪ್ಪು, ವಿವರಣೆ ಸರಿ.

48. **ಹೇಳಿಕೆ** : 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ'

ವಿವರಣೆ : ಭಗವಂತನು ಕೊಟ್ಟದ್ದೆಲ್ಲವನ್ನು ಕೆರೆಗೆ ಹಾಕಿದರೆ ಇಷ್ಟಾರ್ಥಗಳು ನೆರವಾಗುವುದಿಲ್ಲ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ.

(C) ಹೇಳಿಕೆ ತಪ್ಪು, ವಿವರಣೆ ಸರಿ.

(D) ಹೇಳಿಕೆ ಸರಿ, ವಿವರಣೆ ತಪ್ಪು

49. **ಹೇಳಿಕೆ** : ಅಲಂಕಾರ ಭಾವರಸಮೊಂದಿ ಕಳೆವೆತ್ತುದು ಸತ್ಕೃತಿ ; ಅಲ್ಲದುದು ಅಶ್ರಾವ್ಯ ಕಾವ್ಯವು

ವಿವರಣೆ : ಅಲಂಕಾರ, ಭಾವ, ರಸಗಳನ್ನು ಹೊಂದಿದ ಕೃತಿಯು ಶ್ರೇಷ್ಠ ಕೃತಿ ಎಂದು ಪರಿಗಣಿತವಾಗುತ್ತದೆ ; ಹಾಗಿರದ ಕೃತಿಯು ಗ್ರಾಹ್ಯವಲ್ಲ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ.

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ.

50. **ಹೇಳಿಕೆ** : 'ತ್ರಿಪದಿಯು ಕನ್ನಡ ಛಂದೋಗಂಗೆಯ ಗಂಗೋತ್ರಿ'

ವಿವರಣೆ : ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ತ್ರಿಪದಿಗೆ ಗಂಗಾ ನದಿಗಿರುವ ಪವಿತ್ರಸ್ಥಾನ ಲಭಿಸಿದೆ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ತಪ್ಪು, ವಿವರಣೆ ಸರಿ.

(B) ಹೇಳಿಕೆ ಸರಿ, ವಿವರಣೆ ಸರಿ.

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

51. **ಹೇಳಿಕೆ** : 'ಋತಮೊಂದೆ ಗೆಲ್ವುದು ಅನೃತಮಲ್ತು'

ವಿವರಣೆ : ಆರಂಭದಲ್ಲಿ ಸುಳ್ಳಿಗೆ ಗೆಲವಾದರೂ ಕೊನೆಯಲ್ಲಿ ಸತ್ಯ ಮಾತ್ರವೆ ವಿಜಯ ಗಳಿಸುತ್ತದೆ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ, ವಿವರಣೆ ಸರಿ.

(B) ಹೇಳಿಕೆ ತಪ್ಪು, ವಿವರಣೆ ಸರಿ.

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ತಪ್ಪು

www.prepp.in

Prepp
Your Personal Exams Guide

52. **ಹೇಳಿಕೆ** : 'ಒಪ್ಪುವ ಮಾಣಿಕಮಂ ತೌಡಿಂಗೆ ಮಾರುಗುಡುವ ಮರುಳಂ ಪೋಲ್ಗುಂ'
ವಿವರಣೆ : ತೌಡು ಕೊಟ್ಟು ರತ್ನವನ್ನು ಕೊಂಡುಕೊಳ್ಳುವವನು ಬುದ್ಧಿವಂತನಿಗೆ ಸಮನಾಗುತ್ತಾನೆ .
ಇವುಗಳಲ್ಲಿ ಸರಿಯಾದ ಉತ್ತರ
(A) ಹೇಳಿಕೆ ಸರಿ, ವಿವರಣೆ ಸರಿ.
(B) ಹೇಳಿಕೆ ತಪ್ಪು, ವಿವರಣೆ ಸರಿ.
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ತಪ್ಪು

53. **ಹೇಳಿಕೆ** : ಪ್ರತಿಭೆಯುಂ ಅಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯ ಪರಿಚಯಮುಂ ಕವಿತೆಗೆ ಕಾರಣಂ
ವಿವರಣೆ : ಮೂಲಭೂತವಾದ ಪ್ರತಿಭೆ ನಿರಂತರ ಅಧ್ಯಯನ ವಿದ್ಯಾಂಸರ ಸೇವೆ ಮತ್ತು ಪ್ರಾಚೀನ ಕಾವ್ಯಗಳ ಓದು- ಇವಿಷ್ಟು ಕಾವ್ಯ ನಿರ್ಮಾಣಕ್ಕೆ ಕಾರಣಗಳಾಗುತ್ತವೆ.
ಇವುಗಳಲ್ಲಿ ಸರಿಯಾದ ಉತ್ತರ
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ.
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ.

ಅನುಕ್ರಮ ಮಾದರಿ ಪ್ರಶ್ನೆಗಳು :

54. ಈ ಕೆಳಗಿನ ಕವಿ ವಾಕ್ಯದಲ್ಲಿ ಸರಿಯಾದ ಪದಾನುಕ್ರಮವನ್ನು ಗುರುತಿಸಿ.
(A) ನೆಗಳ್ದಿ ಕಾವ್ಯ ಧರ್ಮಮಂ ಧರ್ಮಮುಮಂ ಆದಿಪುರಾಣದೊಳ್ ಅರಿವುದು
(B) ನೆಗಳ್ದಿ ಆದಿಪುರಾಣದೊಳ್ ಅರಿವುದು ಕಾವ್ಯಧರ್ಮಮಂ ಧರ್ಮಮುಮಂ
(C) ನೆಗಳ್ದಿ ಧರ್ಮಮುಮಂ ಆದಿಪುರಾಣ-ದೊಳ್ ಅರಿವುದು ಕಾವ್ಯಧರ್ಮಮುಮಂ
(D) ನೆಗಳ್ದಿ ಆದಿಪುರಾಣದೊಳ್ ಧರ್ಮಮು-ಮಂ ಅರಿವುದು ಕಾವ್ಯಧರ್ಮಮಂ

55. ಈ ಕೆಳಗಿನ ಪದಗಳನ್ನು ಸರಿಯಾದ ಅಕಾರಾದಿ ಕ್ರಮದಲ್ಲಿ ಗುರುತಿಸಿ.
(A) ಕ್ಷತ್ರಿಯ, ಕೋಪ, ದ್ವೀಪ, ದುಮ್ಮಾನ
(B) ಕೋಪ, ದ್ವೀಪ, ದುಮ್ಮಾನ, ಕ್ಷತ್ರಿಯ
(C) ದ್ವೀಪ, ದುಮ್ಮಾನ, ಕ್ಷತ್ರಿಯ, ಕೋಪ
(D) ಕೋಪ, ಕ್ಷತ್ರಿಯ, ದುಮ್ಮಾನ, ದ್ವೀಪ

56. ಕವಿಗಳ ಕಾಲಾನುಕ್ರಮವನ್ನು ಗುರುತಿಸಿ.
(A) ಬಸವಣ್ಣ, ಜನ್ನ, ಲಕ್ಷ್ಮೀಶ, ಮುದ್ದಣ
(B) ಬಸವಣ್ಣ, ಲಕ್ಷ್ಮೀಶ, ಜನ್ನ, ಮುದ್ದಣ
(C) ಮುದ್ದಣ, ಜನ್ನ, ಲಕ್ಷ್ಮೀಶ, ಬಸವಣ್ಣ
(D) ಬಸವಣ್ಣ, ಮುದ್ದಣ, ಲಕ್ಷ್ಮೀಶ, ಜನ್ನ

57. ಕೃತಿಗಳ ಕಾಲಾನುಕ್ರಮವನ್ನು ಗುರುತಿಸಿ.
(A) ಗಿರಿಜಾಕಲ್ಯಾಣ, ಶಾಂತಿಪುರಾಣ, ಹದಿಬದೆಯ ಧರ್ಮ, ಭರತೇಶ ವೈಭವ
(B) ಶಾಂತಿಪುರಾಣ, ಭರತೇಶ ವೈಭವ, ಗಿರಿಜಾ ಕಲ್ಯಾಣ, ಹದಿಬದೆಯ ಧರ್ಮ
(C) ಶಾಂತಿಪುರಾಣ, ಗಿರಿಜಾಕಲ್ಯಾಣ, ಭರತೇಶ ವೈಭವ, ಹದಿಬದೆಯ ಧರ್ಮ
(D) ಹದಿಬದೆಯ ಧರ್ಮ, ಭರತೇಶವೈಭವ, ಗಿರಿಜಾಕಲ್ಯಾಣ, ಶಾಂತಿಪುರಾಣ.

58. ಲೇಖಕರ ಕಾಲಾನುಕ್ರಮವನ್ನು ಗುರುತಿಸಿ.
(A) ಭೈರಪ್ಪ, ನಿರಂಜನ, ಕೊಡಗಿನ ಗೌರಮ್ಮ, ಕೆರೂರು ವಾಸುದೇವಾಚಾರ್ಯ
(B) ಕೆರೂರು ವಾಸುದೇವಾಚಾರ್ಯ, ಕೊಡಗಿನ ಗೌರಮ್ಮ, ನಿರಂಜನ, ಭೈರಪ್ಪ
(C) ಕೊಡಗಿನ ಗೌರಮ್ಮ, ಕೆರೂರು ವಾಸುದೇವಾಚಾರ್ಯ, ನಿರಂಜನ, ಭೈರಪ್ಪ
(D) ಕೆರೂರು ವಾಸುದೇವಾಚಾರ್ಯ, ನಿರಂಜನ, ಕೊಡಗಿನ ಗೌರಮ್ಮ, ಭೈರಪ್ಪ

www.prepp.in

Prepp
Your Personal Exams Guide

59. ಕೃತಿಗಳ ಕಾಲಾನುಕ್ರಮವನ್ನು ಗುರುತಿಸಿ.

(A) ಗಾಂಧಿಕ್ಲಾಸ್, ಕನ್ನಡಿಗರ ಕರ್ಮಕಥೆ, ಮಲೆಗಳಲ್ಲಿ ಮದುಮಗಳು, ಕರ್ವಾಲೊ

(B) ಮಲೆಗಳಲ್ಲಿ ಮದುಮಗಳು, ಕರ್ವಾಲೊ, ಗಾಂಧಿಕ್ಲಾಸ್, ಕನ್ನಡಿಗರ ಕರ್ಮಕಥೆ

(C) ಕರ್ವಾಲೊ, ಕನ್ನಡಿಗರ ಕರ್ಮಕಥೆ, ಗಾಂಧಿಕ್ಲಾಸ್, ಮಲೆಗಳಲ್ಲಿ ಮದುಮಗಳು

(D) ಕನ್ನಡಿಗರ ಕರ್ಮಕಥೆ, ಮಲೆಗಳಲ್ಲಿ ಮದುಮಗಳು, ಕರ್ವಾಲೊ, ಗಾಂಧಿಕ್ಲಾಸ್

60. ಕೃತಿಗಳ ಕಾಲಾನುಕ್ರಮವನ್ನು ಗುರುತಿಸಿ.

(A) ನಿವೇದನ, ನಡೆದು ಬಂದ ದಾರಿ, ಕಾರ್ತೀಕ, ನಿತ್ಯೋತ್ಸವ

(B) ನಿತ್ಯೋತ್ಸವ, ನಿವೇದನ, ನಡೆದು ಬಂದ ದಾರಿ, ಕಾರ್ತೀಕ

(C) ನಡೆದು ಬಂದ ದಾರಿ, ನಿವೇದನ, ಕಾರ್ತೀಕ, ನಿತ್ಯೋತ್ಸವ

(D) ಕಾರ್ತೀಕ, ನಡೆದು ಬಂದ ದಾರಿ, ನಿವೇದನ, ನಿತ್ಯೋತ್ಸವ

61. ನಾಟಕಕಾರರ ಕಾಲಾನುಕ್ರಮವನ್ನು ಗುರುತಿಸಿ.

(A) ಚಂಪಾ, ಪರ್ವತವಾಣಿ, ಶ್ರೀರಂಗ, ಕೈಲಾಸಂ

(B) ಪರ್ತತವಾಣಿ, ಕೈಲಾಸಂ, ಚಂಪಾ, ಶ್ರೀರಂಗ

(C) ಕೈಲಾಸಂ, ಶ್ರೀರಂಗ, ಪರ್ವತವಾಣಿ, ಚಂಪಾ

(D) ಶ್ರೀರಂಗ, ಕೈಲಾಸಂ, ಪರ್ವತವಾಣಿ, ಚಂಪಾ

62. ಆಲಂಕಾರಿಕರ ಕಾಲಾನುಕ್ರಮವನ್ನು ಗುರುತಿಸಿ.

(A) ವಾಮನ, ಭರತ, ವಿಶ್ವನಾಥ, ಮಮ್ಮಟ

(B) ಭರತ, ವಾಮನ, ಮಮ್ಮಟ, ವಿಶ್ವನಾಥ

(C) ವಿಶ್ವನಾಥ, ಭರತ, ವಾಮನ, ಮಮ್ಮಟ

(D) ಮಮ್ಮಟ, ವಾಮನ, ಭರತ, ವಿಶ್ವನಾಥ

63. ಶಾಸನಗಳ ಕಾಲಾನುಕ್ರಮವನ್ನು ಗುರುತಿಸಿ.

(A) ಹಲ್ಮಿಡಿ ಶಾಸನ, ಆತಕೂರು ಶಾಸನ, ಗಂಗಾಧರಂ ಶಾಸನ, ಲಕ್ಕುಂಡಿ ಶಾಸನ

(B) ಗಂಗಾಧರಂ ಶಾಸನ, ಹಲ್ಮಿಡಿ ಶಾಸನ, ಲಕ್ಕುಂಡಿ ಶಾಸನ, ಆತಕೂರು ಶಾಸನ

(C) ಗಂಗಾಧರಂ ಶಾಸನ, ಲಕ್ಕುಂಡಿ ಶಾಸನ, ಹಲ್ಮಿಡಿ ಶಾಸನ, ಆತಕೂರು ಶಾಸನ

(D) ಹಲ್ಮಿಡಿ ಶಾಸನ, ಗಂಗಾಧರಂ ಶಾಸನ, ಲಕ್ಕುಂಡಿ ಶಾಸನ, ಆತಕೂರು ಶಾಸನ

64. ಸಂಶೋಧಕರ ಕಾಲಾನುಕ್ರಮವನ್ನು ಗುರುತಿಸಿ.

(A) ಶಂಬಾ ಜೋಷಿ, ಆರ್.ಸಿ. ಹೀರೇಮಠ, ಎಂ.ಎಂ. ಕಲಬುರ್ಗಿ, ವಿವೇಕ ರೈ

(B) ಆರ್.ಸಿ. ಹಿರೇಮಠ, ಶಂಬಾ ಜೋಷಿ, ವಿವೇಕ ರೈ, ಎಂ.ಎಂ. ಕಲಬುರ್ಗಿ

(C) ಶಂಬಾ ಜೋಷಿ, ಎಂ.ಎಂ. ಕಲಬುರ್ಗಿ, ಆರ್.ಸಿ. ಹಿರೇಮಠ, ವಿವೇಕ ರೈ

(D) ಎಂ.ಎಂ. ಕಲಬುರ್ಗಿ, ಶಂಬಾ ಜೋಷಿ, ಆರ್.ಸಿ. ಹಿರೇಮಠ, ವಿವೇಕ ರೈ

www.prepp.in

Prepp
Your Personal Exams Guide

65. ನಾಟಕಗಳ ಕಾಲಾನುಕ್ರಮವನ್ನು ಗುರುತಿಸಿ.

(A) ಬಿರಳ್‌ಗೆ ಕೊರಳ್, ಏಕಲವ್ಯ, ಮಹಾಪುರುಷ, ಹೆಬ್ಬಿರಳು

(B) ರಾಮವರ್ಮ ಲೀಲಾವತಿ, ಬಿರಳ್‌ಗೆ ಕೊರಳ್, ಮಹಾಪುರುಷ, ಹೆಬ್ಬಿರಳು

(C) ರಾಮವರ್ಮ ಲೀಲಾವತಿ, ಹೆಬ್ಬಿರಳು, ಬಿರಳ್‌ಗೆ ಕೊರಳ್, ಮಹಾಪುರುಷ,

(D) ಏಕಲವ್ಯ, ಮಹಾಪುರುಷ, ಬಿರಳ್‌ಗೆ ಕೊರಳ್, ಲೀಲಾವತಿ

66. ಕಾವ್ಯನಾಮದ ಹೊಂದಾಣಿಕೆಯನ್ನು ಗುರುತಿಸಿ.

a. ಪರ್ವತವಾಣಿ	i. ಸುಬ್ರಹ್ಮಣ್ಯರಾಜೇ ಅರಸ್
b. ಶ್ರೀನಿವಾಸ	ii. ವೆಂಕಟೇಶ ತಿರುಕೋ ಕುಲಕರ್ಣಿ
c. ಗಳಗನಾಥ	iii. ಪಿ. ನರಸಿಂಗರಾವ್
d. ಚದುರಂಗ	iv. ಮಾಸ್ತಿ ವೆಂಕಟೇಶ ಅಯ್ಯಂಗಾರ್
	v. ಕುಳಕುಂದ ಶಿವರಾಯ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	v	i	ii	iv
(B)	iii	iv	ii	i
(C)	ii	i	v	iv
(D)	i	v	ii	iv

67. ಭಾಷೆ ಮತ್ತು ಪದಗಳ ಹೊಂದಾಣಿಕೆಯನ್ನು ಗುರುತಿಸಿ.

a. ತಮಿಳು	i. ಎನಮಿದಿ
b. ಕನ್ನಡ	ii. ವಟ್ಟು
c. ತೆಲುಗು	iii. ಎಣ್ಮೊ
d. ತುಳು	iv. ಎಟ್ಟು
	v. ಎಂಟು

ಇದಕ್ಕೆ ಸರಿಯಾದ ಉತ್ತರ

	a	b	c	d
(A)	iv	v	i	iii
(B)	iv	v	ii	iii
(C)	i	v	iii	iv
(D)	ii	v	iv	iii

68. ಕಾವ್ಯ ಮತ್ತು ಕಾವ್ಯ ರೂಪಗಳ ಹೊಂದಾಣಿಕೆಯನ್ನು ಗುರುತಿಸಿ.

a. ಅನಂತನಾಥ ಪುರಾಣ	i. ಗದ್ಯ
b. ಮೋಹನ ತರಂಗಿಣಿ	ii. ವೃತ್ತ
c. ರಕ್ಷಾ ಶತಕ	iii. ರಗಳೆ
d. ಅದ್ಭುತ ರಾಮಾಯಣ	iv. ಚಂಪು
	v. ಸಾಂಗತ್ಯ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	ii	iv	i	iii
(B)	iv	iii	ii	v
(C)	iv	v	ii	i
(D)	iii	ii	v	ii

69. ಗುರು ಲಘುವಿನ ವಿನ್ಯಾಸ ಮತ್ತು ಗಣನಾಮಗಳ ಹೊಂದಾಣಿಕೆಯನ್ನು ಗುರುತಿಸಿ.

a. ಆದಿಲಘು, ಉಳಿದವು ಗುರು	i. ನಗಣ
b. ಮಧ್ಯಲಘು, ಉಳಿದವು ಗುರು	ii. ಸಗಣ
c. ಅಂತ್ಯಲಘು, ಉಳಿದವು ಗುರು	iii. ಯಗಣ
d. ಸರ್ವಲಘು	iv. ರಗಣ
	v. ತಗಣ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	iii	ii	v	i
(B)	ii	i	iii	iv
(C)	iv	iii	ii	v
(D)	iii	iv	v	i

www.prepp.in

70. ಕವಿ ಹಾಗೂ ಅವರ ನಿಜನಾಮದ ಹೊಂದಾಣಿಕೆಯನ್ನು ಗುರುತಿಸಿ.

a. ಕುಮಾರವ್ಯಾಸ	i. ಲಕ್ಷ್ಮೀ-ನಾರಾಯಣಪ್ಪ
b. ಶ್ರೀಪಾದರಾಯ	ii. ನಾರಣಪ್ಪ
c. ಪುರಂದರದಾಸ	iii. ತಿಮ್ಮಪ್ಪ ನಾಯಕ
d. ಕನಕದಾಸ	iv. ಲಕ್ಷ್ಮೀನಾರಾಯಣ
	v. ಶ್ರೀನಿವಾಸನಾಯಕ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	i	iii	v	ii
(B)	ii	iv	v	iii
(C)	v	ii	iv	iii
(D)	ii	iv	iii	v

71. ಪದಗಳ ಸಂಬಂಧವನ್ನು ಗುರುತಿಸಿ.

a. ದೇಶ್ಯ	i. ಜನ್ನ
b. ತತ್ಸಮ	ii. ನೇಸರ್
c. ಪೋರ್ಚುಗೀಸ್	iii. ರೇಡಿಯೊ
d. ತದ್ಭವ	iv. ಪಾದ್ರಿ
	v. ಕಮಲ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	ii	v	iv	i
(B)	iii	ii	v	iv
(C)	v	i	iii	iv
(D)	iv	ii	i	iii

72. ಕವಿ- ಕವನಗಳನ್ನು ಹೊಂದಿಸಿರಿ.

a. ಬಿ.ಎಂ.ಶ್ರೀ	i. ಪುರುಷ ಸೂಕ್ತ
b. ಗೋಪಾಲಕೃಷ್ಣ ಅಡಿಗ	ii. ಭಾವಗೀತ
c. ದ.ರಾ. ಬೇಂದ್ರೆ	iii. ಭೂಮಿಗೀತ
d. ಶಿವರುದ್ರಪ್ಪ	iv. ಕಾಣಿಕೆ
	v. ಗಾಂಧಿ ಸ್ಮರಣೆ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	i	ii	iii	v
(B)	ii	iv	v	iii
(C)	iii	ii	iv	i
(D)	iv	iii	ii	i

73. ಪ್ರಕಾರ- ಲೇಖಕರ ಹೊಂದಾಣಿಕೆಯನ್ನು ಗುರುತಿಸಿ.

a. ಗಿರಡ್ಡಿ ಗೋವಿಂದರಾಜ	i. ಗ್ರಂಥ ಸಂಪಾದನೆ
b. ಸೇಡಿಯಾಪು ಕೃಷ್ಣಭಟ್ಟ	ii. ಅನುವಾದ
c. ಡಿ.ಕೆ. ಭೀಮಸೇನ ರಾವ್	iii. ಕಾದಂಬರಿ
d. ಬಿ. ವೆಂಕಟಾಚಾರ್ಯ	iv. ವಿಮರ್ಶೆ
	v. ಸಂಶೋಧನೆ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	ii	v	iii	iv
(B)	iv	iii	v	ii
(C)	iv	v	i	ii
(D)	iii	ii	v	iv

74. ಕಾದಂಬರಿ ಪ್ರಕಾರಗಳ ಹೊಂದಾಣಿಕೆಯನ್ನು ಗುರುತಿಸಿ.

a. ಸಾಮಾಜಿಕ ಕಾದಂಬರಿ	i. ಕದಳಿಯ ಕರ್ಪೂರ
b. ಐತಿಹಾಸಿಕ ಕಾದಂಬರಿ	ii. ಯಯಾತಿ
c. ಅನುವಾದಿತ ಕಾದಂಬರಿ	iii. ಮಹಾಬ್ರಾಹ್ಮಣ
d. ಪೌರಾಣಿಕ ಕಾದಂಬರಿ	iv. ಕನ್ಯಾಬಲಿ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	iv	ii	iii	i
(B)	iv	i	ii	iii
(C)	ii	iii	iv	i
(D)	i	iii	ii	iv

75. ಆಯಾ ಲೇಖಕರ ಕ್ಷೇತ್ರವನ್ನು ಗುರುತಿಸಿ.

a. ಜಿ.ಎಚ್. ನಾಯಕ	i. ಸಣ್ಣ ಕಥೆ
b. ಜೀ.ಶಂ. ಪರಮಶಿವಯ್ಯ	ii. ಛಂದಸ್ಸು
c. ಚಿದಾನಂದ ಮೂರ್ತಿ	iii. ವಿಮರ್ಶೆ
d. ಕುಂ. ವೀರಭದ್ರಪ್ಪ	iv. ಜಾನಪದ
	v. ಶಾಸನ

ಇದಕ್ಕೆ ಸರಿಯಾದ ಉತ್ತರ

	a	b	c	d
(A)	iii	iv	v	i
(B)	i	iii	ii	v
(C)	ii	iv	iii	v
(D)	iii	iv	i	v

Space For Rough Work